# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 40/2017**
**ಪಿ.ಡಬ್ಲ್ಯೂಃ1, ಮಹ್ಮದ ಇಸ್ಮಾಯಿಲ್**

**ದಿನಾಂಕ :28-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
ಪಾಟಿ ಸವಾಲು :- ಶ್ರೀ ಸಿ ಬಿ ಎ ವಕೀಲರಿಂದ

ನನ್ನ ಮುತ್ತ್ಯಾ ತೀರಿಕೊಂಡು 60-70 ವರ್ಷ ಆಗಿರಬಹುದು. ನಾನು ಆ ಬಗ್ಗೆ ಮರಣ ಪ್ರಮಾಣ ಪತ್ರ ಹಾಕಿಲ್ಲ ನನ್ನ ತಂದೆ ತೀರಿಕೊಂಡು 23 ವರ್ಷವಾಯಿತ್ತು. ನಮ್ಮ ಕುಂಟುಂಬಕ್ಕೆ 12 ಕುರಿಗಿ ಜಮೀನು ಇತ್ತು. ನನ್ನ ತಂದೆ ಹಾಗೂ ಅವರ ಅಣ್ಣಾ ತಮ್ಮಂದಿರ ನಡುವೆ ವಿಭಾಗ ಆಗಿಲ್ಲ. ದಾವಾ ಸ್ವತ್ತು 1971 ರಿಂದ ಇವತ್ತಿನವರೆಗೂ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. ನನ್ನ ಮುತ್ತ್ಯಾ ಜೀವಂತ ಇದ್ದಾಗ ಪ್ರತಿವಾದಿ 1 ಇವರ ತಂದೆಗೆ ದಾವಾ ಸ್ವತ್ತನ್ನು ಮೌಖಿಕವಾಗಿ ಕೊಟ್ಟು ಕಬ್ಜೆ ನೀಡಿದ್ದು, ನನ್ನ ತಂದೆ 1971 ರಲ್ಲಿ ಅದನ್ನು ಕಾಗದದಲ್ಲಿ ಬರೆದುಕೊಟ್ಟಿದ್ದಾರೆ ಅಂದರೆ ಸುಳ್ಳು ಎಂದು ಹೇಳುತ್ತಾರೆ. ಆ ಕಾರಣಕ್ಕೆ 18-06-1971 ರಲ್ಲಿ 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿ ಅದೆಲ್ಲ ಸುಳ್ಳು ಎಂದು ಹೇಳುತ್ತಾರೆ. ಆ ಕಾರಣದಿಂದ ಪ್ರತಿವಾದಿ 1 ಇವರು ಅವಗಿನಿಂದಲೇ ಕಬ್ಜೆದಲ್ಲಿದ್ದಾರೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. ನಂತರ ಶಾಂತರಾಜ ಇವರ ಮಕ್ಕಳ ಹಾಗೂ ಮೊಮ್ಮಕ್ಕಳ ಹೆಸರಿಗೆ ಕ್ರಮೇಣ ಹಕ್ಕು ಬದಲಾವಣೆ ಆಗಿದೆ ಅಂದರೆ ಸುಳ್ಳು ಎಂದು ಹೇಳುತ್ತಾರೆ

ನಾನು ಸದರಿಯವರ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು ತಪ್ಪು ಎಂದು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. ನಾನು ವಾದ ಪತ್ರದಲ್ಲಿ ಪ್ರತಿವಾದಿಗಳ ಬೊಕ್ಕಾ ತಂದೆ ತುಳಾಜಾ ಇವರ ಹೆಸರಿಗೇ ಇದ್ದ ಜಮೀನನ್ನು ಕಂದಾಯ ಅಧಿಕಾರಿಗಳ ಜೋತೆ ಶ್ಯಾಮೀಲಾಗಿ ಪ್ರತಿವಾದಿಗಳ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದೇನೆ ಅಂದರೆ ಸಾಕ್ಷಿ ನಾನು ಹೇಳಿಲ್ಲ ಎಂದು ಹೇಳುತ್ತಾರೆ. ಅದು 08-06-1967 ರಲ್ಲಿ ಬೊಕ್ಕಾ ಇವರಿಂದ ನೊಂದಾಯಿತ ಖರೀದಿ ಪ್ರತದ ಮೂಲಕ ಖರಿದಿಸಿದ ಸ್ವತ್ತು ಎಂದರೆ ಸಾಕ್ಷಿ ಉತ್ತರ ನೀಡಿಲ್ಲ. ದಾವಾ ಸ್ವತ್ತು ನನ್ನ ಮುತ್ತ್ಯಾನ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಸಾಕ್ಷಿ ಮತ್ತೆ ಹೇಳುವುದೇನೆಂದರೆ ನನ್ನ ತಂದೆಯ ಹೆಸರಿಗೆ ಆಗಿ ನಂತರ ನಾವು ಪಾಲು ಮಾಡಿಕೊಂಡು ಖಾತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ.

**ಅಸಲು ದಾವಾ ನಂ: 40/2017**
**ಪಿ.ಡಬ್ಲ್ಯೂ:1, ಮಹ್ಮದ ಇಸ್ಮಾಯಿಲ್**

ಆ ಬಗ್ಗೆ ದಾಖಲೆ ಇಲ್ಲ ಎಂದು ಹೇಳುತ್ತಾರೆ. ನಾನು ನನ್ನ ಮುತ್ಯಾ ತೀರಿಕೊಂಡ ನಂತರ ಅವರ ಒಬ್ಬನೇ ಮಗ ನನ್ನ ತಂದೆಯಾಗಿದ್ದು ಅವರಿಗೆ ಖಾತೆ ಆಗಿತ್ತು ಅವರು ತೀರಿಕೊಂಡ ನಂತರ ನನ್ನ ಹೆಸರಿಗೆ ಖಾತೆ ಆಗಿದೆ ಎಂದು ವಾದ ಪತ್ರದಲ್ಲಿ ಹೇಳಿಲ್ಲ,

ಈ ಹಂತದಲ್ಲಿ ವಕೀಲರು ಮುಂದುವರೆ ಪಾಟಿ ಸವಾಲಿಗಾಗಿ ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ